# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ

## ಉತ್ತರ ಕನ್ನಡ : ಕಾರವಾರ

**ಎಸ್ಸಿ ನಂ. 36/2014**

**ದೋ.ಸಾ. : 13 ಪ್ರಾ.ಸಾ. : 3**

ಸಾಕ್ಷಿಯ ಹೆಸರು : ರವಿ ವಿಜಯನ್

ತಂದೆಯ ಹೆಸರು : ವಿಜಯನ್

ವಯಸ್ಸು : 42 ವರ್ಷ

ಕೆಲಸ : ಕೂಲಿ ಕೆಲಸ.

ವಾಸ : ಕದ್ರಾ, ಕಾರವಾರ.

**ದಿನಾಂಕಃ 17-05-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1. ಹೀಗೆ 10 ವರ್ಷಗಳ ಹಿಂದೆ ಪೋಲಿಸರು ನನ್ನನ್ನು ಹಾಗೂ ಚಾಸಾ-12 ರವರನ್ನು ಕದ್ರಾ ಪೋಲಿಸ್ ಠಾಣೆಗೆ ಪಂಚನಾಮೆಗೆ ಕರೆಸಿದ್ದರು. ಆ ದಿನ ಸಂಜೆ 7.30 ಗಂಟೆಗೆ ನಾನು ಪೋಲಿಸ್ ಠಾಣೆಗೆ ಹೋಗಿರುತ್ತೇನೆ. ಪೊಲೀಸರು ಮೃತೆ ಅಶ್ವಿನಿಯ ಬಟ್ಟೆಗಳಾದ ಹಳದಿ, ಬಿಳಿ, ಹಸಿರು, ನೀಲಿ ಬಣ್ಣದ ಹೂವಿನ ಡಿಜೈನ್ ಉಳ್ಳ ಕೆಂಪು ಬಣ್ಣದ ಒಂದು ಫ್ರಾಕ್, ಹಸಿರು ಬಣ್ಣದ ಒಂದು ಒಳ ಫ್ರಾಕ್, ಹಳದಿ, ನೀಲಿ, ಕೇಸರಿ, ಬಿಳಿ ಬಣ್ಣದ ಡಿಜೈನ್ ಉಳ್ಳ ಕಪ್ಪು ಬಣ್ಣದ ಒಂದು ಚಡ್ಡಿಯನ್ನು ಆಸ್ಪತ್ರೆಯಿಂದ ತಂದು ತನಿಖಾಧಿಕಾರಿಯವರ ಮುಂದೆ ಹಾಜರುಪಡಿಸಿದ್ದು, ಅವುಗಳನ್ನು ನಮ್ಮ ಸಮಕ್ಷಮ ಪಂಚನಾಮೆ ಮಾಡಿ ಜಪ್ತುಪಡಿಸಿಕೊಂಡರು. ಪಂಚನಾಮೆಯನ್ನು ಸಂಜೆ 7.30 ರಿಂದ 8.00 ಗಂಟೆಯವರೆಗೆ ಬರೆದಿರುತ್ತಾರೆ. ಸದರಿ ಪಂಚನಾಮೆಗೆ ನಾನು ಮತ್ತು ಚಾಸಾ-12 ರವರು ರುಜು ಮಾಡಿರುತ್ತೇವೆ. ಸಾಕ್ಷಿಯು ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-21 ಎಂದು, ಸಾಕ್ಷಿಯ ರುಜುವನ್ನು 21(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಕೆಂಪು ಬಣ್ಣದ ಫ್ರಾಕ್, ಹಸಿರು ಬಣ್ಣದ ಫ್ರಾಕ್ ಮತ್ತು ಕಪ್ಪು ಬಣ್ಣದ ಚಡ್ಡಿಯನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ಮು.ಮಾ 14 ರಿಂದ 16 ಎಂದು ಗುರುತಿಸಲಾಗಿದೆ. ಮು.ಮಾ 14 ರ ಮೇಲೆ ಇರುವ ಸಾಕ್ಷಿಯ ರುಜುವನ್ನು ನಿಪಿ-14(ಎ) ಎಂದು ಗುರುತಿಸಲಾಯಿತು. ಮು.ಮಾ 15 ಮತ್ತು 16 ರ ಮೇಲೆ ಅಂಟಿಸಿರುವ ಚೀಟಿಯು ಹಾಳಾಗಿರುವುದರಿಂದ ಸಾಕ್ಷಿಯ ರುಜು ಕಾಣುತ್ತಿರುವುದಿಲ್ಲ.

**ಪಾಟೀ ಸವಾಲುಃ ಆರೋಪಿ ಪರ ನ್ಯಾಯವಾದಿ ಶ್ರೀ ಎ.ಎ.ಎ ವಕೀಲರಿಂದ**

2. ನಾನು ಪೊಲೀಸ ಠಾಣೆಗೆ ಮೊದಲ ಬಾರಿ ಹೋಗಿರುತ್ತೇನೆ. ಪೋಲಿಸರು ಪಂಚನಾಮೆಗೆ ಬರುವಂತೆ ನನಗೆ ಲಿಖಿತವಾಗಿ ಯಾವುದೇ ನೋಟಿಸಲು ನೀಡಿರುವುದಿಲ್ಲ. ಠಾಣೆಯ ಬರಹಗಾರರು ಹಾಗೂ ತನಿಖಾಧಿಕಾರಿಗಳು ಪ್ರತ್ಯೇಕ ಕೊಠಡಿಯಲ್ಲಿ ಇರುತ್ತಾರೆ ಎಂದರೆ ಸರಿ. ನಿಪಿ-21 ಪಂಚನಾಮೆಯ ಮೇಲೆ ನಾನು ಹಾಗೂ ಚಾಸಾ-12 ರವರು ರುಜು ಮಾಡಿರುತ್ತೇವೆ. ನಿಪಿ-21 ಪಂಚನಾಮೆಯಲ್ಲಿ ಚೆಕ್ಕು ಬಂದಿಯನ್ನು ಯಾವ ಪುಟದಲ್ಲಿ ಬರೆಯಲಾಗಿದೆ ಎಂದು ನನಗೆ ಗೊತ್ತಿಲ್ಲ. ನಿಪಿ-21 ಪಂಚನಾಮೆಯಲ್ಲಿ ಏನು ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ. ನಿಪಿ-21 ಪಂಚನಾಮೆನ್ನು ಯಾರು ಮತ್ತು ಯಾವಾಗ ಬರೆದರು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ನಾನು ಠಾಣೆಗೆ ಹೋದಾಗ ಮು.ಮಾ 14 ರಿಂದ 16 ವಸ್ತುಗಳು ಸೀಲಾಗಿದ್ದ ಸ್ಥಿತಿಯಲ್ಲಿತ್ತು ಎಂದರೆ ಸಾಕ್ಷಿಯು ಅವುಗಳನ್ನು ತೆಗೆಯಲಾಗಿತ್ತು ಎಂದು ನುಡಿಯುತ್ತಾರೆ. ಯಾವ ಪ್ಯಾಕೇಟ್ ನಲ್ಲಿ ಯಾವ ವಸ್ತು ಇರುತ್ತದೆ ಎಂದು ಪ್ರಶ್ನಿಸಲಾಗಿ, ಸಾಕ್ಷಿಯು ಅವುಗಳನ್ನು ತೆಗೆದು ತೋರಿಸಿದರೆ ಹೇಳುತ್ತೇನೆ ಎಂದು ನುಡಿಯುತ್ತಾರೆ. ಅವುಗಳನ್ನು ಮೇಲಿನ ಸೀಲುಗಳನ್ನು ಯಾರು ಮತ್ತು ಯಾವಾಗ ಹಾಕಿದ್ದರು ಎಂದು ನನಗೆ ಹೇಳಲು ಬರುವುದಿಲ್ಲ. ನಮ್ಮ ಸಮಕ್ಷಮ ಪೋಲಿಸರು ಯಾವುದೇ ಪಂಚನಾಮೆ ಮಾಡಿಲ್ಲ ಮತ್ತು ಯಾವುದೇ ವಸ್ತುಗಳನ್ನು ಜಪ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಮು.ಮಾ 14 ರಿಂದ 16 ವಸ್ತುಗಳನ್ನು ಪೋಲಿಸರು ಈ ಪ್ರಕರಣದಲ್ಲಿ ಸೃಷ್ಟಿಸಿದ್ದು, ಪೋಲಿಸರ ಹೇಳಿಕೆಯ ಮೇಲೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮು.ಮಾ 14 ರಿಂದ 16 ವಸ್ತುಗಳಿಗೂ ಮತ್ತು ಈ ಪ್ರಕರಣಕ್ಕೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ- ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ